# ಸ್ವಾಮಿ ವಿವೇಕಾನಂದರ ಆಪ್ತ ಬಂಧು

# ಜೊಸೆಫಿನ್ ಮೆಕ್‌ಲೌಡ್

ಪ್ರೊ.ಎನ್.ಕೃಷ್ಣಸ್ವಾಮಿ

*ವಿವೇಕಾನಂದರ ಜ್ವಾಲಾಮಯ ವ್ಯಕ್ತಿತ್ವ ಅನೇಕ ಜ್ಯೋತಿಗಳನ್ನು ಬೆಳಗಿಸಿತು. ಆ ರೀತಿ ಬೆಳಕನ್ನು ಪಡೆದ ಒಬ್ಬ ಅಪರೂಪದ ವ್ಯಕ್ತಿ ಜೊಸೆಫಿನ್ ಮೆಕ್‌ಲೌಡ್. ಇವರ ಜೀವನ ಪರಿಚಯ ಮಾತ್ರವಲ್ಲದೆ ವಿವೇಕಾನಂದರ ವ್ಯಕ್ತಿತ್ವದ ವಿಭಿನ್ನ ಮುಖಗಳೂ ಈ ಲೇಖನದಲ್ಲಿ ಮೂಡಿ ಬಂದಿವೆ. ಪ್ರೊ. ಕೃಷ್ಣಸ್ವಾಮಿಯವರು ಬೆಂಗಳೂರಿನಲ್ಲಿರುವ ವಿವೇಕಾನಂದ ಎಜುಕೇಷನ್ ಸೊಸೈಟಿಯ ಅಧ್ಯಕ್ಷರಾಗಿದ್ದಾರೆ.*



ಜೊಸೆಫಿನ್ ಮೆಕ್‌ಲೌಡ್

**ಸ್ವಾಮಿ ವಿವೇಕಾನಂದರ** ಪಾಶ್ಚಾತ್ಯ ದೇಶಗಳ ಪ್ರವಾಸ-ಪ್ರವಚನ ಕಾರ್ಯದಲ್ಲಿ ಅವರಿಗೆ ಸಹಾಯ ಮಾಡಿದವರು ಅನೇಕ ಅಪರಿಚಿತರು, ಶಿಷ್ಯ-ಶಿಷ್ಯೆಯರು. ಮಿಸೆಸ್ ಜಾರ್ಜ್ ಹೇಲ್ ಎಂಬಾಕೆ ಚಿಕಾಗೋ ನಗರದಲ್ಲಿ ಅವರಿಗೆ ಆತಿಥ್ಯ ನೀಡಿ ಸಹಾಯ ಮಾಡದಿದ್ದರೆ ವಿವೇಕಾನಂದರು ಸರ್ವಧರ್ಮ ಸಮ್ಮೇಳನಕ್ಕೆ ಹೋಗುತ್ತಿದ್ದರೋ ಎಂಬುದೇ ಸಂದೇಹಾಸ್ಪದವಾಗುತ್ತದೆ. ಈಕೆಯನ್ನು *'Mother'* ಎಂದು ಕರೆದು ವಿವೇಕಾನಂದರು ಕೊನೆಯವರೆಗೂ ಆಕೆಯ ಮಗನಂತೆ ನಡೆದುಕೊಂಡರು. ವಿವೇಕಾನಂದರ ಕಾರ್ಯದಲ್ಲಿ ಆಮೇಲೆ ಅವರಿಗೆ ಬೆಂಬಲವಾಗಿ ನಿಂತ ಮಹಿಳೆಯರು ಜೊಸೆಫಿನ್ ಮೆಕ್‌ಲೌಡ್ ಮತ್ತು ಇವರ ಅಕ್ಕ ಬೆಟ್ಟಿ. ಜೊಸೆಫಿನ್‌ಗೆ ಸ್ವಾಮೀಜಿ ಜಯಾ ಎಂದು ಹೆಸರಿಟ್ಟರು. ಜೋಜೋ ಎಂದು ಪ್ರೀತಿಯಿಂದ ಕರೆದರು. ಹೀಗೆ ಅವರಿಗೆ ನೆರವಿತ್ತ ಹದಿನೈದು ಇಪ್ಪತ್ತು ಮಹಿಳೆಯರ ಹೆಸರನ್ನು ಹೇಳಬಹುದು. ವಿವೇಕಾನಂದರಿಗೆ ಈ ಮಹಿಳೆಯರನ್ನು, ಅವರ ನಿಃಸ್ವಾರ್ಥ ಪ್ರೇಮವನ್ನು, ಧೀಶಕ್ತಿಯನ್ನು ಎಷ್ಟು ಹೊಗಳಿದರೂ ತೃಪ್ತಿಯಾಗುತ್ತಿರಲಿಲ್ಲ. ಜಯಾ, ಸೋದರಿ ನಿವೇದಿತಾ, ಮಿಸೆಸ್ ಓಲಿಬುಲ್ ಇವರು ಮೂವರನ್ನು ವಿವೇಕಾನಂದರು ಟ್ರಿನಿಟಿ—ತ್ರಿಮೂರ್ತಿಗಳು ಎಂದು ಕರೆಯುತ್ತಿದ್ದರು.

ಸ್ವತಂತ್ರ ಪ್ರವೃತ್ತಿಯ ಜೋ ಮದುವೆಯ ಸಂಕೋಲೆ ಧರಿಸಲಿಲ್ಲ, ಕುಮಾರಿಯಾಗಿಯೇ ಉಳಿದರು. ಅದರಿಂದಾಗಿ ಯಾವ ಬಂಧನವೂ ಇಲ್ಲದೆ ವಿವೇಕಾನಂದರ ಕಾರ್ಯಮಾಡುವುದು ಆಕೆಗೆ ಸುಲಭ ಆಯಿತು. ತಮ್ಮ ಅಕ್ಕ ಬೆಟ್ಟಿ ಮತ್ತು ಆಕೆಯ ಕುಟುಂಬದಲ್ಲಿ ಜೋ ಒಬ್ಬರಾಗಿದ್ದರು. ಭಾವ ಫ್ರಾನ್ಸಿಸ್ ಲೆಗೆಟ್‌ಗೆ ಜೋ ಮೇಲೆ ಬಹು ವಿಶ್ವಾಸ, ಅವರ ಮಕ್ಕಳಿಗೆ ಚಿಕ್ಕಮ್ಮನ ಮೇಲೆ ಅಪಾರ ಪ್ರೀತಿ.

ಜೋ ಪ್ರವಾಸ ಪ್ರೇಮಿ. ಒಬ್ಬಂಟಿಯಾಗಿಯೋ, ಇತರರೊಡನೆಯೋ ಪ್ರಯಾಣ ಮಾಡುತ್ತಲೇ ಇರುವವರು. ತಂದೆ ಗಳಿಸಿ, ಬಿಟ್ಟಿದ್ದ ಆಸ್ತಿಯಿಂದಾಗಿ ಸ್ವಾತಂತ್ರ್ಯ ಇದ್ದಿತು. ಹಣದ ವಿಷಯದಲ್ಲಿ ಸ್ಕಾಟ್ಲೆಂಡಿನ ಹಿನ್ನೆಲೆ ಹೊಂದಿದ್ದ ಈಕೆಗೆ ಹಿಡಿತ ಇದ್ದರೂ ಸತ್ಕಾರ್ಯಗಳಿಗಾಗಿ ಧಾರಾಳವಾಗಿ ದಾನ ಮಾಡುತ್ತಿದ್ದರು.

## ಮೊದಲ ಭೇಟಿ

೧೮೯೬, ಜನವರಿ ೨೯, ಜೋ ಮತ್ತು ಬೆಟ್ಟಿ ತಮ್ಮ ಸ್ನೇಹಿತೆ ಡೋರಾ ಜೊತೆಗೆ ವಿವೇಕಾನಂದರ ಭಾಷಣ ಕೇಳಲು ಹೋದರು. ಆಗ ವಿವೇಕಾನಂದರ ಭಾಷಣಗಳು ನ್ಯೂಯಾರ್ಕಿನಲ್ಲಿ ಒಂದು ಸಣ್ಣ ಬಾಡಿಗೆಯ ಕೊಠಡಿಯಲ್ಲಿ ನಡೆಯುತ್ತಿದ್ದವು. ಡೋರಾ ಮೊದಲೇ ಸ್ವಾಮಿಗಳ ಭಾಷಣಗಳಿಗೆ ಮಾರುಹೋಗಿದ್ದವಳು. ಸಣ್ಣ ಸ್ಥಳ—ಈ ಮೂವರು ಹೋಗುವ ವೇಳೆಗೆ ಅಲ್ಲಿದ್ದ ಕೆಲವೇ ಕುರ್ಚಿಗಳು ಭರ್ತಿಯಾಗಿದ್ದವು. ಜನರು ಹೊರಗೆ ಮೆಟ್ಟಲುಗಳ ಮೇಲೆ, ಎಲ್ಲಿ ಸ್ಥಳ ಇದ್ದರೆ ಅಲ್ಲಿ ಕುಳಿತಿದ್ದರು. ಮೂವರು ಮಹಿಳೆಯರೂ ನೆಲದ ಮೇಲೆಯೇ ಕುಳಿತರು.

ಸ್ವಾಮಿಗಳು ಬಂದರು. ಕೊಠಡಿಯ ಮೂಲೆಯಲ್ಲಿ ನಿಂತರು. ಅಗ್ನಿಜ್ವಾಲೆಯ ಬಣ್ಣದ ಬಟ್ಟೆ ಧರಿಸಿದ್ದರು. ಅವರ ಕಣ್ಣಿನ ಜ್ವಾಲೆ ಬಟ್ಟೆಯ ಬಣ್ಣಕ್ಕಿಂತ ಪ್ರಖರವಾಗಿ ಹೊಳೆಯಿತು. ಮೊದಲ ಮಾತಿನಿಂದಲೇ ಜೋಗೆ ತಿಳಿಯಿತು, '**ನನ್ನ ಜೀವನದಲ್ಲಿ ಕಂಡ ಶ್ರೇಷ್ಠತಮ ವ್ಯಕ್ತಿ ಈತನೇ**' ಎಂದು. ಜೋ ಬರೆಯುತ್ತಾರೆ, 'ಆ ಶಕ್ತಿ ನಿಮ್ಮಲ್ಲಿರದಿದ್ದರೆ ಅದನ್ನು ದಾನ ಮಾಡಲಾರಿರಿ, ನಿಮ್ಮಲ್ಲೇ

ಹಣ ಇರದಿದ್ದರೆ ಹೇಗೆ ದಾನ ಮಾಡುವುದು?...ಆತ ನುಡಿದುದು ಸತ್ಯ ಎಂದು ಆಗಲೇ ನನಗೆ ತಿಳಿಯಿತು. ಆತನ ಎರಡನೆಯ ವಾಕ್ಯವೂ ಸತ್ಯ, ಮೂರನೆಯ ವಾಕ್ಯವೂ ಸತ್ಯ. ನಾನು ಏಳು ವರ್ಷ ಆತನ ಮಾತುಗಳನ್ನು ಕೇಳಿದೆ, ಆತ ನುಡಿದುದೆಲ್ಲ ಸತ್ಯವೇ ಆಗಿದ್ದಿತು. ಆ ಕ್ಷಣದಲ್ಲಿಯೇ ನನ್ನ ಜೀವನಕ್ಕೆ ಒಂದು ಹೊಸ ಅರ್ಥ ಬಂದಿತು. ನೀವು ಅನಂತರು, ಅನಂತದಲ್ಲಿರುವಿರಿ ಎಂದು ಅವರು ನಮಗೆ ತೋರಿಸಿದರು.'

ಸ್ವಾಮಿಗಳನ್ನು ನೋಡುವುದಕ್ಕೂ ಮೊದಲೇ ಜೋ ಭಗವದ್ಗೀತೆಯನ್ನು ಓದಿದ್ದರು, ಅದರಿಂದ ಬಹು ಪ್ರಭಾವಿತರಾಗಿದ್ದರು. ವಿವೇಕಾನಂದರು ಭಗವದ್ಗೀತೆಯ ವಿಷಯ ಮಾತನಾಡಿದಾಗ ಅವರಿಗೆ ಶ್ರೀ ಕೃಷ್ಣನೆ ಅಲ್ಲಿ ನಿಂತು ಗೀತೋಪದೇಶ ಮಾಡುತ್ತಿರುವನು ಎಂದು ನಿಶ್ಚಯವಾಯಿತು. ಅಲ್ಲಿ ನೂರು ಜನ ಸೇರಿದ್ದರು. ಆದರೆ ಜೋಗೆ ಕಾಣುತ್ತಿದ್ದುದು ವಿವೇಕಾನಂದರ ಮೂರ್ತಿ ಒಂದೇ.

### ಸಮಾಧಿ ದರ್ಶನ

ಫ್ರಾನ್ಸಿಸ್ ಲೆಗೆಟ್ ಮತ್ತು ಬೆಟ್ಟಿಯ ವಿವಾಹ ಪ್ಯಾರಿಸ್‌ನಲ್ಲಿ ಆಯಿತು. ಆಗ ಸ್ವಾಮಿ ವಿವೇಕಾನಂದರು ಅಲ್ಲಿದ್ದು ದಂಪತಿಗಳನ್ನು ಹರಸಿದರು. ಜೂನ್ ೧೮೯೫ರಲ್ಲಿ ಲೆಗೆಟ್ ಸ್ವಾಮಿಗಳನ್ನು ಪರ್ಸಿ ಎಂಬ ಕಾಡು ಪ್ರದೇಶದ ಶಿಖರಕ್ಕೆ ಆಹ್ವಾನಿಸಿದ. ಸ್ವಾಮೀಜಿ, ಲೆಗೆಟ್, ಮೆಕ್‌ಲೌಡ್ ಸೋದರಿಯರು ಇವರೆಲ್ಲ ಪರ್ಸಿಗೆ ಹೋದರು. ಆ ಅರಣ್ಯದ ನಿರ್ಜನತೆ, ಶಾಂತಿ ಸ್ವಾಮೀಜಿಗೆ ಬಹು ಪ್ರಿಯ ಆಯಿತು. ಅವರ ಆರೋಗ್ಯ ಉತ್ತಮಗೊಂಡಿತು. ಒಂದು ದಿನ ಬೆಳಗ್ಗೆ ಸ್ವಾಮೀಜಿ ಭಗವದ್ಗೀತೆಯ ಪುಸ್ತಕವನ್ನು ಹಿಡಿದುಕೊಂಡು ಮನೆಯಿಂದ ಆಚೆಗೆ ನಡೆದರು. ಸ್ವಾಮೀಜಿ ಹೇಳಿದರು, 'ಜೋ, ಆ ಪೈನ್ ಮರದ ಅಡಿಯಲ್ಲಿ ಕುಳಿತು ಗೀತೆ ಓದುತ್ತೇನೆ. ಈವತ್ತು ಭರ್ಜರಿಯಾದ ಬ್ರೇಕ್ ಫಾಸ್ಟ್ (ಬೆಳಗಿನ ತಿಂಡಿ) ಏರ್ಪಾಡು ಮಾಡು' ಎಂದು.

ಅರ್ಧ ಘಂಟೆಯ ನಂತರ ಜೋ ನೋಡುತ್ತಾಳೆ! ಸ್ವಾಮೀಜಿ ಅಲ್ಲಿ ಅಲ್ಲಾಡದೆ ಕುಳಿತಿದ್ದಾರೆ. ಗೀತೆ ಅವರ ಕೈಯಿಂದ ಜಾರಿದ್ದಿತು. ಅವರ ಬಟ್ಟೆ ಕಣ್ಣೀರಿನಿಂದ ತೊಯ್ದಿದ್ದಿತು. ಹತ್ತಿರ ಹೋಗಿ ನೋಡಿದಳು. ಅವರ ಉಸಿರಾಟ ನಿಂತಿದ್ದಿತು. ನಡುಗಿಹೋದಳು— 'ಸ್ವಾಮೀಜಿ ಸತ್ತುಹೋಗಿರಬೇಕು.' ಲೆಗೆಟ್ ಬಳಿಗೆ ಓಡಿದಳು. 'ಬೇಗ ಬಾ, ವಿವೇಕಾನಂದರು ನಮ್ಮನ್ನು ಅಗಲಿಹೋಗಿದ್ದಾರೆ.' ಫ್ರಾಂಕ್ ಬಂದು ನೋಡಿ, 'ಅವರು ಸಮಾಧಿಯಲ್ಲಿ ಇದ್ದಾರೆ. ಅಲ್ಲಾಡಿಸಿ ನೋಡುತ್ತೇನೆ'—ಎಂದರು. ಜೋ 'ಬೇಡ, ಬೇಡ' ಎಂದು ಕೂಗಿದಳು. 'ಆಳವಾದ ಧ್ಯಾನದಲ್ಲಿರುವಾಗ ತನ್ನನ್ನು ಯಾರೂ ಮುಟ್ಟಬಾರದು' ಎಂದು ಸ್ವಾಮೀಜಿ ಹೇಳಿದ್ದರು. ಕೊನೆಗೆ ಸುಮಾರು ಕಾಲು ಘಂಟೆಯ ನಂತರ ಉಸಿರಾಟದ ಚಿಹ್ನೆ ಕಂಡುಬಂದಿತು. ಸ್ವಾಮೀಜಿ 'ನಾನು ಯಾರು? ಎಲ್ಲಿದ್ದೇನೆ?' ಎಂದುಕೊಳ್ಳುತ್ತಿದ್ದರು. ಆಮೇಲೆ ನಿಂತುಕೊಂಡು, 'ಸಾರಿ, (*sorry*), ನಾನು ನಿಮ್ಮನ್ನೆಲ್ಲ ಹೆದರಿಸಿಬಿಟ್ಟೆ. ಆಗಾಗ ನಾನು ಈ ಸ್ಥಿತಿಯಲ್ಲಿರುತ್ತೇನೆ. ಆದರೆ ನಾನು ನಿಮ್ಮ ದೇಶದಲ್ಲಿ ಶರೀರತ್ಯಾಗ ಮಾಡುವುದಿಲ್ಲ. ಬೆಟ್ಟಿ, ಈಗ ನನಗೆ ಬಹು ಹಸಿವಾಗಿದೆ....

### ಇಬ್ಬರು ಅಮೆರಿಕನ್ ಮಹಿಳೆಯರು ಭಾರತದಲ್ಲಿ

೧೮೯೭ರಲ್ಲಿ ವಿವೇಕಾನಂದರು ಭಾರತಕ್ಕೆ ಹಿಂದಿರುಗಿದ ಮೇಲೆ ಬಾಸ್ಟನ್ನಿನ ಮಿಸೆಸ್ ಓಲಿ ಬುಲ್ ಮತ್ತು ಜೋ ಇಬ್ಬರೂ ಭಾರತಕ್ಕೆ ಹೋಗಲು ಯತ್ನಿಸುತ್ತಿದ್ದರು. ವಿವೇಕಾನಂದರಿಗೆ ಬರೆದರು. ೧೮೯೭ರ ಜುಲೈ ೧೦ನೆಯ ತಾರೀಖಿನ ಪತ್ರದಲ್ಲಿ ಸ್ವಾಮೀಜಿ ಜೋಗೆ ಬರೆದರು: '.... ಖಂಡಿತ ಭಾರತಕ್ಕೆ ಬಾ, ಆದರೆ ಇದು ನೆನಪಿರಲಿ. ಇಲ್ಲಿ ಯೂರೋಪಿಯನ್ನರೂ ಹಿಂದೂಗಳೂ ಎಣ್ಣೆ-ನೀರಿನ ಹಾಗೆ ಬೇರೆ ಬೇರೆಯಾಗಿರುತ್ತಾರೆ. ಭಾರತೀಯರೊಂದಿಗೆ ಓಡಾಡುವವರನ್ನು ಯೂರೋಪಿಯನ್ನರು ಬಹಿಷ್ಕರಿಸುತ್ತಾರೆ.

'ಮಹಾನಗರಗಳಲ್ಲಿಯೂ ಒಳ್ಳೆ ಹೋಟೆಲುಗಳಿರುವುದಿಲ್ಲ. ಪ್ರಯಾಣಿಸುವಾಗ ಸೇವಕರನ್ನು ಕರೆದೊಯ್ಯಬೇಕಾಗುತ್ತದೆ.... ಜನ ಲಂಗೋಟಿ ಮಾತ್ರ ಧರಿಸಿರುತ್ತಾರೆ. ಇದನ್ನು ಸಹಿಸಬೇಕಾಗುತ್ತದೆ; ನಾನೂ ಬರಿಯ ಲಂಗೋಟಿ ತೊಟ್ಟಿರುವುದನ್ನು ನೋಡುತ್ತೀಯೆ. ಎಲ್ಲೆಲ್ಲೂ ಕಸ, ಕೊಳಕು, ಕಂದುಬಣ್ಣದ ಜನರು. ಆದರೆ ತತ್ತ್ವಶಾಸ್ತ್ರ ಮಾತನಾಡಲು ಬಹು ಜನ ಸಿಗುತ್ತಾರೆ.....'

ಇನ್ನೊಂದು ಪತ್ರದಲ್ಲಿ ಸ್ವಾಮೀಜಿ ಬರೆದರು, 'ಬಾ, ಕೊಳಕು, ದಾರಿದ್ರ್ಯ, ಧರ್ಮದ ವಿಚಾರ ಮಾತನಾಡುವ ಲಂಗೋಟಿಗಳು. ಇದಲ್ಲದೆ ಬೇರೆ ಏನಾದರೂ ಬೇಕಾಗಿದ್ದರೆ ಬರಬೇಡ. ನಮಗೆ ಇನ್ನೊಂದು ಟೀಕೆಯ ಮಾತೂ ಬೇಡ.'

ಜೋ, ಧೀರಮಾತಾ, ಸ್ವಾಮಿ ಶಾರದಾನಂದ ಮೂವರೂ ೧೮೯೮ರ ಜನವರಿಯಲ್ಲಿ ಅಮೆರಿಕದಿಂದ ಭಾರತಕ್ಕೆ ಹೊರಟರು. ಫೆಬ್ರವರಿ ೪ಕ್ಕೆ ಬೊಂಬಾಯಿ ಸೇರಿದರು. ಸ್ವಾಮಿಗಳ ಪ್ರಿಯ ಶಿಷ್ಯ ಅಳಸಿಂಗ ಪೆರುಮಾಳ್ ಇವರನ್ನು ಸ್ವಾಗತಿಸಿದರು. ಆತನ ಹಣೆಯ ಮೇಲಿದ್ದ ದೊಡ್ಡ ನಾಮಗಳು ಜೋಗೆ ಆಘಾತ ಉಂಟುಮಾಡಿದವು. ಮುಂದೆ ಈ ವಿಚಾರವನ್ನು ಕುರಿತು ಜೋ ಸ್ವಾಮಿಗಳಲ್ಲಿ ಹೇಳಿದಳು, 'ಮಿ॥ ಅಳಸಿಂಗ ಹಣೆಯ ಮೇಲೆ ಶ್ರೀವೈಷ್ಣವ ಗುರುತು ಧರಿಸಿದ್ದಾರೆ, ಇದು ದೌರ್ಭಾಗ್ಯಕರ.' ಇದನ್ನು ಕೇಳಿದೊಡನೆ ವಿವೇಕಾನಂದರು ಖಾರವಾಗಿ ಹೇಳಿದರು : 'ದೂರ ಸರಿ! ನೀನು ಏನು ಮಹಾ ಸಾಧಿಸಿರುವುದು!' ಈ ಬೈಗುಳನ್ನು ಕೇಳಿ ಜೋಗೆ ಕಣ್ಣಿನಲ್ಲಿ ನೀರು ತುಂಬಿತು. ಆದರೆ ಆಗ ಅವರಿಗೆ ಗೊತ್ತಿರಲಿಲ್ಲ—ಅಳಸಿಂಗ ಸ್ವಾಮೀಜಿಗಾಗಿ ಮನೆಮನೆಗೆ ಹೋಗಿ ಭಿಕ್ಷೆ ಎತ್ತಿದ್ದ ಮಹಾ ಭಕ್ತ. ಅಳಸಿಂಗನಿಲ್ಲದಿದ್ದರೆ ಜೋ ವಿವೇಕಾನಂದರನ್ನು ನೋಡುವ ಸಂಭವವೇ ಇರುತ್ತಿರಲಿಲ್ಲ, ಎಂದು. ಮತ್ತೆ ವಿವೇಕಾನಂದರು ಎಚ್ಚರಿಸಿದರು, 'ನಮಗೆ ಇನ್ನು ಒಂದು ಟೀಕೆಯ ಮಾತನ್ನೂ ಸಹಿಸಲಾಗುವುದಿಲ್ಲ!'

ಫೆಬ್ರವರಿ ೧೨ರಂದು ಕಲ್ಕತ್ತಾ ಸೇರಿದ ಇವರನ್ನು ಸ್ವಾಗತಿಸಲು ವಿವೇಕಾನಂದರು ಕೆಲ ಭಕ್ತರೊಡನೆ ರೈಲ್ವೆ ಸ್ಟೇಷನ್ನಿಗೆ ಬಂದರು. ಭಕ್ತರು ಹಾಕಿದ ಹೂಮಾಲೆಗಳು ಜೋಗೆ ಮುಜುಗರವನ್ನು ತಂದವು.



ಕಾಶ್ಮೀರದಲ್ಲಿ, ೧೮೯೮, ಎಡದಿಂದ ಬಲಕ್ಕೆ ಜೋಸೆಫಿನ್ ಮೆಕ್‌ಲೌಡ್, ಓಲಿ ಬುಲ್, ಸ್ವಾಮಿ ವಿವೇಕಾನಂದ ಮತ್ತು ಭಗಿನಿ ನಿವೇದಿತ

ಜಯಾ—ಧೀರಮಾತಾ ಇವರ ಮನೆ.

ಆಗ ಮಠ ನೀಲಾಂಬರ ಮುಖರ್ಜಿ ಎಂಬುವವರ ಮನೆಯಲ್ಲಿತ್ತು. ಹತ್ತಿರದಲ್ಲಿಯೆ ಬೇಲೂರಿನಲ್ಲಿ ಹೊಸ ಮಠ ಕಟ್ಟುವುದಕ್ಕಾಗಿ ಭೂಮಿಯನ್ನು ಕೊಂಡುಕೊಳ್ಳಲಾಗಿತ್ತು. ಈ ಭೂಮಿಯ ಒಂದು ತುದಿಯಲ್ಲಿ ಒಂದು ಹಳೆಯ ಮನೆ ಇದ್ದಿತು. ಅಮೆರಿಕನ್ ಮಹಿಳೆಯರಿಬ್ಬರೂ ಸ್ವಾಮಿಗಳ ಒಪ್ಪಿಗೆ ಪಡೆದು ಆ ಮನೆಗೆ ಸುಣ್ಣ ಬಣ್ಣ ಮಾಡಿಸಿ, ದುರಸ್ತಿ ಮಾಡಿ, ಕುರ್ಚಿ ಮೇಜುಗಳನ್ನು ತಂದು ವಾಸಯೋಗ್ಯವನ್ನಾಗಿ ಮಾಡಿದರು. '**ಯಾಂಕಿ**'ಗಳ ಈ ಚಮತ್ಕಾರವನ್ನು ನೋಡಿ ವಿವೇಕಾನಂದರಿಗೆ ವಿಸ್ಮಯವಾಯಿತು. ಇಬ್ಬರು ಮಹಿಳೆಯರು ಸುಮಾರು ಎರಡು ತಿಂಗಳು ಇಲ್ಲಿ ವಾಸ ಮಾಡಿದರು. ಆಮೇಲೆ ಪ್ರತಿದಿನ ವಿವೇಕಾನಂದರು ದಿನಕ್ಕೆ ಒಂದು ಎರಡು ಸಲ ಯಾರಾದರೂ ಸಹಚರ-ಸಂನ್ಯಾಸಿಗಳೊಡನೆ ಬಂದು ಅಮೆರಿಕನ್ ಮಹಿಳೆಯರೊಡನೆ ಟೀ ತೆಗೆದುಕೊಳ್ಳುತ್ತಿದ್ದರು.

## ವಿವೇಕಾನಂದರ ಹಾಸ್ಯಪ್ರಿಯತೆ

ಒಂದು ದಿನ ವಿವೇಕಾನಂದರಿಗೆ ಹಾಸ್ಯ ಮಾಡಬೇಕೆಂದೆನಿಸಿತು. ಇದು ನಡೆದದ್ದು ಬಹುಶಃ ೧೯೦೧ರಲ್ಲಿ. ಜೋಗೆ ಸ್ವಲ್ಪ ಅಕ್ಕಿ ಬೇಕಾಗಿದ್ದಿತು. ಅದನ್ನು ವಿವೇಕಾನಂದರು ತಮ್ಮ ಗುರುಭಾಯಿ ಸ್ವಾಮಿ ಸುಬೋಧಾನಂದರ ಮೂಲಕ ಕಳುಹಿಸಿದರು. ಸುಬೋಧಾನಂದರು ಸರಳ, ಭೋಳೇ ಸ್ವಭಾವದವರು, ಮಗುವಿನಂತೆ. ವಿವೇಕಾನಂದರ ಮಾತು ಅವರಿಗೆ ವೇದ ವಾಕ್ಯ. ವಿವೇಕಾನಂದರು ಅಕ್ಕಿ ಇರಿಸಿದ್ದ ತಟ್ಟೆಯನ್ನು ಸುಬೋಧಾನಂದರಿಗೆ ಕೊಟ್ಟು 'ಇದನ್ನು ಮಿಸ್ ಮೆಕ್‌ಲೌಡ್‌ಗೆ ಕೊಡು. ಅವಳು "ಥ್ಯಾಂಕ್ ಯು" ಎನ್ನುತ್ತಾಳೆ. ಆಗ ನೀನು ಗಡುಸಾಗಿ "ಡೋಂಟ್ ಕೇರ್" ಎಂದು ಹೇಳಿ ಬಂದುಬಿಡು' ಎಂದರು.

ಸುಬೋಧಾನಂದರಿಗೆ ಮನದಟ್ಟು ಮಾಡಲು ಮತ್ತೆ ಕೇಳಿದರು,

'ಮೆಕ್‌ಲೌಡ್ ಏನು ಹೇಳುತ್ತಾಳೆ?'

'ಥ್ಯಾಂಕ್ ಯು' ಎಂದು.

'ನೀನು ಏನು ಹೇಳುತ್ತೀ?'

'ಡೋಂಟ್ ಕೇರ್!'

ಸುಬೋಧಾನಂದರು ಹೋದರು. ತಟ್ಟೆ ಆಕೆಗೆ ಕೊಟ್ಟರು. ಸ್ವಾಮೀಜಿ ಹೇಳಿದ ಹಾಗೆಯೇ ಜೋ 'ಥ್ಯಾಂಕ್ ಯು (ವಂದನೆಗಳು)' ಎಂದರು. ಇವರು 'ಡೋಂಟ್ ಕೇರ್ (ನನಗೇನೂ ಬೇಕಾಗಿಲ್ಲ)' ಎಂದು ಹೇಳಿ ಮುಖ ತಿರುಗಿಸಿಕೊಂಡು ಹೊರಟು ಹೋದರು. ಈ ವಿಚಿತ್ರ ನಡವಳಿಕೆ ಜೋಗೆ ಅಸಾಧ್ಯ ಕೋಪ ಬರಿಸಿತು. ಅವರು ತಟ್ಟೆಯನ್ನು ಎತ್ತಿಕೊಂಡೆ ವಿವೇಕಾನಂದರ ಹತ್ತಿರಕ್ಕೆ ಸರ ಸರ ನಡೆದು ಬಂದರು. ಕೋಪದಿಂದ ಉರಿಯುತ್ತಾ, 'ಈ ಹುಡುಗನಿಗೆ ಏನು ಆಗಿದೆ! ನಾನು ಸೌಜನ್ಯದಿಂದ "ಥ್ಯಾಂಕ್ ಯು" ಎಂದರೆ "ಡೋಂಟ್ ಕೇರ್" ಎಂದು ಹೊರಟು ಹೋದನಲ್ಲ!' ಎಂದು ಸ್ವಾಮೀಜಿಗೆ ದೂರು ಹೇಳಿದರು. ಇದನ್ನು ಕೇಳಿ ಸ್ವಾಮೀಜಿ ಬಿದ್ದು ಬಿದ್ದು ನಗತೊಡಗಿದರು. ಆಗ ಈ ಚೇಷ್ಟೆಯನ್ನು ನಡೆಸಿದವರು ವಿವೇಕಾನಂದರೇ ಎಂದು ಜೋಗೆ ತಿಳಿಯಿತು.

೧೮೯೮ ಮೇ ತಿಂಗಳಿನಲ್ಲಿ ಸ್ವಾಮಿ ವಿವೇಕಾನಂದರು, ಅವರ ಕೆಲವು ಗುರುಭಾಯಿಗಳು ಮತ್ತು ಈ ಮೂವರು ವಿದೇಶೀ ಮಹಿಳೆಯರು ಉತ್ತರ ಭಾರತದ ಯಾತ್ರೆಗೆ ಹೊರಟರು. ಆಲ್ಮೋರ, ನೈನಿತಾಲ್ ಅನಂತರ ಕಾಶ್ಮೀರ ಮುಂತಾದ ಸ್ಥಳಗಳನ್ನು ಸಂದರ್ಶಿಸಿ ಸ್ವಾಮೀಜಿ ಮೂಲಕ ಭಾರತದ ಇತಿಹಾಸ, ಸಾಂಸ್ಕೃತಿಕ ಹಿರಿಮೆ ಮುಂತಾದುವುಗಳ ಬಗ್ಗೆ ಈ ಮೂವರು ವಿದೇಶೀ ಮಹಿಳೆಯರು ಸಾಕಷ್ಟು ತಿಳಿದುಕೊಂಡರು.

## ಉದ್ಬೋಧನ ಪ್ರಕಾಶನ

ರಾಮಕೃಷ್ಣ-ವಿವೇಕಾನಂದ ತತ್ವಗಳನ್ನು ಪ್ರಚಾರಮಾಡುವುದಕ್ಕಾಗಿ ಬ್ರಹ್ಮವಾದಿನ್ ಮತ್ತು ಪ್ರಬುದ್ಧ ಭಾರತ ಎಂಬ ಎರಡು ಇಂಗ್ಲಿಷ್ ಪತ್ರಿಕೆಗಳು ಪ್ರಕಟವಾಗುತ್ತಿದ್ದವು. ಸಾಮಾನ್ಯ ಜನರನ್ನು ತಲುಪಬೇಕಾದರೆ ಬಂಗಾಳೀ ಭಾಷೆಯಲ್ಲಿ ಒಂದು ಪತ್ರಿಕೆಯನ್ನು ಪ್ರಕಟಿಸಬೇಕು ಎಂದು ಸ್ವಾಮಿ ವಿವೇಕಾನಂದ, ಸ್ವಾಮಿ ಬ್ರಹ್ಮಾನಂದ ಮತ್ತಿತರರು ಯೋಚಿಸಿದರು. ಆದರೆ, ಇಂತಹ ಪ್ರಕಟನೆಗೆ ಬಹಳ ಖರ್ಚಾಗುತ್ತದೆ, ಅದು ತನ್ನ ಕಾಲಿನ ಮೇಲೆ ತಾನು ನಿಲ್ಲಲಾರದು, ಅನೇಕ ಸಂನ್ಯಾಸಿಗಳು ಮನೆಮನೆಗೆ ತಿರುಗಿ ಚಂದಾದಾರರನ್ನು ಕೂಡಿಸಿದರೆ ಪತ್ರಿಕೆ ನಡೆಯಬಲ್ಲುದು ಎಂದು ಸ್ವಾಮಿ ವಿವೇಕಾನಂದರು ಹೇಳಿದರು.

ಬೇಲೂರು ಮಠದ ಕಟ್ಟಡಕ್ಕಾಗಿ ಮಿಸೆಸ್ ಬುಲ್ ಸಾವಿರಾರು ಡಾಲರ್ ದಾನ ಕೊಟ್ಟರು. ಇತರರೂ ಕೆಲವರು ಹಣಕೊಟ್ಟರು.

ತನ್ನಲ್ಲಿ ಅಷ್ಟು ಹಣ ಇಲ್ಲದುದರಿಂದ ಜೋ ಏನೂ ಕೊಡಲಿಲ್ಲ. ಅನೇಕ ದಿನಗಳಿಂದ ಜೋ ಸ್ವಾಮೀಜಿಗೆ ಕೊಡಲು ಹಣ ಕೂಡಿಸುತ್ತಿದ್ದರು. ಒಂದು ದಿನ ಜೋ ಮೆಕ್ಲೌಡ್ ಸ್ವಾಮೀಜಿಗೆ 'ನಾನು ನಿಮ್ಮ ಕಾರ್ಯಕ್ಕಾಗಿ ಸ್ವಲ್ಪ ಹಣ ಕೊಡುತ್ತೇನೆ', ಎಂದರು. ಸ್ವಾಮೀಜಿ ಆಶ್ಚರ್ಯದಿಂದ 'ಏನು, ಏನು?' ಎಂದರು. ಜೋ, 'ಹೌದು.' ಸ್ವಾಮೀಜಿ 'ಎಷ್ಟು?' ಜೋ, 'ಎಂಟುನೂರು ಡಾಲರ್.' ಅಲ್ಲಿಯೇ ವಿವೇಕಾನಂದರು ಸ್ವಾಮಿ ತ್ರಿಗುಣಾತೀತರಿಗೆ, 'ಇಗೋ, ನಿಮ್ಮ ಮುದ್ರಣ ಯಂತ್ರದ ಖರ್ಚು ನಿಭಾಯಿಸುವ ಹಣ ಬಂದಿದೆ,' ಎಂದರು.



ರಿಜ್‌ಲಿ ಮೇನರ್‌ನಲ್ಲಿ ಸ್ವಾಮೀಜಿ, ತುರೀಯಾನಂದ, ಅಭೇದಾನಂದ, ಜೋ ಮತ್ತಿತರರು

## ಜೋ ಮತ್ತು ಓಲಿ ಬುಲ್ ಅಮೆರಿಕಕ್ಕೆ

ಜನವರಿ ೯, ೧೮೯೯ರಂದು ಇಬ್ಬರು ಅಮೆರಿಕನ್ ಮಹಿಳೆಯರು ಬೊಂಬಾಯಿಂದ ಅಮೆರಿಕಕ್ಕೆ ಹಡಗು ಹತ್ತಿದ್ದರು. ವಿವೇಕಾನಂದರ ಸಂಪರ್ಕದಿಂದ ಜೋ (ಜಯಾ) ವ್ಯಕ್ತಿತ್ವವೇ ಬದಲಾಯಿತು. ಅವರು ಸಂತೋಷಕೂಟಗಳು, ಸಾಮಾಜಿಕ ಕೂಟಗಳು, ಇವೆಲ್ಲವನ್ನೂ ತೊರೆದರು. ಆಧ್ಯಾತ್ಮಿಕ ಚಿಂತನೆಯಲ್ಲಿ ಮುಳುಗಿದರು. ತಮ್ಮ ಅಕ್ಕನ ಮಕ್ಕಳನ್ನು ಬೆಳೆಸುವ ಜವಾಬ್ದಾರಿಯಲ್ಲಿ ಸಹಕರಿಸಿದರು. ಅಮೆರಿಕದಲ್ಲಿ ವೇದಾಂತ ಪ್ರಚಾರದ ಕೆಲಸಕ್ಕಾಗಿ ಅಲ್ಲಿಗೆ ಬಂದ ಸ್ವಾಮಿ ಶಾರದಾನಂದ ಮತ್ತು ಇತರ ಸಂನ್ಯಾಸಿಗಳಿಗೆ ಎಲ್ಲ ನೆರವು ಕೊಟ್ಟರು.

ಒಂದು ದಿನ ಸ್ವಾಮಿ ಶಾರದಾನಂದರ ಭಾಷಣದಲ್ಲಿ ಜೋ ಮೊದಲ ಸಾಲಿನ ಕುರ್ಚಿಯಲ್ಲಿಯೇ ಕುಳಿತಿದ್ದರು. ವಿವೇಕಾನಂದರ ಪ್ರವಚನ ಕೇಳಿದ ಅವರಿಗೆ ಈ ಭಾಷಣ ನೀರಸವಾಗಿದ್ದಿತೇನೋ, ಗಾಢವಾಗಿ ನಿದ್ರೆ ಮಾಡಿದರು. ಭಾಷಣ ಮುಗಿದ ಮೇಲೆ ಬೀಳ್ಕೊಡುವಾಗ ಶಾರದಾನಂದರು ವಿಚಾರಿಸಿದರು, 'ಸುಖವಾಗಿ ನಿದ್ರೆ ಬಂದಿತೆ?' ಎಂದು. ಇಬ್ಬರೂ ಮನಸಾರೆ ನಕ್ಕರು.

## ವಿವೇಕಾನಂದರ ಕೊನೆಯ ಅಮೆರಿಕ ಯಾತ್ರೆ

೧೮೯೯ರಲ್ಲಿ ವಿವೇಕಾನಂದರು ಮತ್ತೆ ಅಮೆರಿಕಕ್ಕೆ ಬಂದರು. ಈ ಸಲ ಅವರೊಡನೆ ಸ್ವಾಮಿ ತುರೀಯಾನಂದರು ಬಂದರು. ಇಬ್ಬರು ಸ್ವಾಮಿಗಳನ್ನೂ ನೇರವಾಗಿ ಲೆಗೆಟ್ ಅವರ ಹಳ್ಳಿಯ ಮನೆ ರಿಜ್‌ಲಿ ಮೇನರ್ (*Ridgely Manor*)ಗೆ ಕರೆದೊಯ್ದರು. ಕೆಲವು ದಿನ ಅಲ್ಲಿ ವಿಶ್ರಾಮ ಪಡೆದರು. ಈ ಸಲ ವಿವೇಕಾನಂದರು ಲಾಸ್ ಏಂಜಲಿಸ್ ಮತ್ತು ಸ್ಯಾನ್ ಫ್ರಾನ್ಸಿಸ್ಕೋ ಮೊದಲಾದ ಅಮೆರಿಕದ ಪಶ್ಚಿಮ ತೀರದ ನಗರಗಳಲ್ಲಿ ವೇದಾಂತ ಪ್ರಚಾರ ಮಾಡಿದರು. ಹೊಸ ಶಿಷ್ಯರು ದೊರಕಿದರು. ಜೊ ಅವರ ಕೆಲಸದಲ್ಲಿ ನೆರವಾದರು.

## ವಿವೇಕಾನಂದರ ತಲೆಕೂದಲು, ಅವರ ಉಂಗುರ

ಪಾಶ್ಚಾತ್ಯ ದೇಶಗಳಲ್ಲಿದ್ದಾಗ ವಿವೇಕಾನಂದರು ತಲೆ ಮುಂಡನ ಮಾಡಿಸುತ್ತಿರಲಿಲ್ಲ. ಕೂದಲು ಬೆಳೆಯಲು ಬಿಡುತ್ತಿದ್ದರು. ಅಮೆರಿಕದಲ್ಲಿ ಒಂದು ದಿನ ಸ್ವಾಮೀಜಿ ಒಬ್ಬರೇ ಕುಳಿತಿದ್ದಾಗ ಜೋ ಮೆಕ್‌ಲೌಡ್ ಸದ್ದಿಲ್ಲದೆ ಅವರ ಹಿಂದೆ ಹೋಗಿ ಒಂದು ಕತ್ತರಿಯಿಂದ ಸ್ವಾಮೀಜಿಯ ತಲೆ ಕೂದಲ ತುದಿಯನ್ನು ಕತ್ತರಿಸಿಕೊಂಡರು! ಸ್ವಾಮೀಜಿಗೆ ಆಶ್ಚರ್ಯವಾಯಿತು. ಅವರು ಕೋಪದಿಂದ ಹಿಂದಕ್ಕೆ ತಿರುಗಿ 'ಏನು ಮಾಡುತ್ತಿದ್ದೀ?' ಎಂದು ಕೇಳಿದರು. ಜೋ ಧೈರ್ಯದಿಂದ ಉತ್ತರ ಕೊಟ್ಟರು, 'ನಿಮ್ಮ ಕೂದಲು ಸ್ವಲ್ಪ ಕತ್ತರಿಸಿಕೊಂಡೆ. ನಿಮ್ಮನ್ನು ಕೇಳಿದ್ದರೆ ನೀವು ನನಗೆ ಹೀಗೆ ಮಾಡಲು ಬಿಡುತ್ತಿರಲಿಲ್ಲ. ಆದುದರಿಂದ ನಿಮಗೆ ಹೇಳದೆ ಕತ್ತರಿಸಿಕೊಂಡೆ...'

ತಲೆಗೂದಲನ್ನು ಒಂದು ವಿಶೇಷವಾಗಿ ತಯಾರಿಸಿದ ನೀಲ ಮಣಿಯ ಪದಕದಲ್ಲಿ ಇರಿಸಿ ಅದನ್ನು ಧರಿಸುತ್ತಿದ್ದರು. ಈ ನೀಲಮಣಿ ಅವರಿಗೆ ಒಬ್ಬ ಭಾರತೀಯ ಯುವಕ ಪ್ರೀತಿಯಿಂದ ಕಾಣಿಕೆಯಾಗಿ ಕೊಟ್ಟದ್ದು. ಪ್ಯಾರಿಸ್‌ನ ಅತಿ ಪ್ರಸಿದ್ಧ ಅಕ್ಕಸಾಲಿಗ ಕಲಾಕಾರ ಲಿಲಾಕ್ ಈ ಪದಕವನ್ನು ಜೋಗಾಗಿ ತಯಾರಿಸಿಕೊಟ್ಟನು.

ಹೀಗೆಯೇ ಜೋ ಸ್ವಾಮೀಜಿಯ ಹತ್ತಿರ ಇದ್ದ ಒಂದು ಉಂಗುರವನ್ನೂ ಸದಾ ಧರಿಸುತ್ತಿದ್ದರು. ಒಂದು ದಿನ ವಿವೇಕಾನಂದರ ಕೈ ಬೆರಳಿನಲ್ಲಿ ಈ ಉಂಗುರ ಜೋ ಕಣ್ಣಿಗೆ ಬಿದ್ದಿತು. ಅದನ್ನು ನೋಡಿ ಅವರು ಸ್ವಾಮೀಜಿಗೆ ಹೇಳಿದರು, 'ಇದೇನು, ಸ್ವಾಮೀಜಿ, ನೀವು ಉಂಗುರ ಧರಿಸಿದ್ದೀರಾ? ನೀವು ಸಂನ್ಯಾಸಿ. ಉಂಗುರ ಧರಿಸಬಾರದು.' ಆ ಕ್ಷಣವೇ ಸ್ವಾಮೀಜಿ ಉಂಗುರವನ್ನು ಕಳಚಿ ಜೋಗೆ ಕೊಟ್ಟುಬಿಟ್ಟರು. ಆಮೇಲೆ ಜೋ ಆ ಉಂಗುರದ ಒಳಗೆ ವಿವೇಕಾನಂದರ ಕೂದಲನ್ನು ಸ್ವಲ್ಪ ಸೇರಿಸಿದರು. ಅದು ಅವರ ಅಮೂಲ್ಯ ಆಸ್ತಿ ಆಯಿತು.

(ಮುಂದುವರಿಯುತ್ತದೆ)